**ಸಮಗ್ರ ಶಿಕ್ಷಣ ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ,**
**ಬೆಂಗಳೂರು-560 001**

*************************************************************************************************

ಕಡತ ಸಂಖ್ಯೆ:SSK/PLAN/52/2022-JDA/E-7910 ದಿನಾಂಕ: 19-06-2023

**ಸುತ್ತೋಲೆ**

ವಿಷಯ: 2022-23ನೇ ಸಾಲಿನ ಮಕ್ಕಳವಾರು ಮಾಹಿತಿಯನ್ನು ಯುಡೈಸ್+ತಂತ್ರಾಂಶದಲ್ಲಿ ಇಂದೀಕರಿಸಲು ಹಾಗೂ ದೃಢೀಕರಿಸುವ (Validation and Certification) ಕುರಿತು.

ವಿಷಯಕ್ಕೆ ಸಂಬಂಧಿಸಿದಂತೆ ಶಿಕ್ಷಣ ಮಂತ್ರಾಲಯವು 2022-23ನೇ ಸಾಲಿನಿಂದ ಮಕ್ಕಳ ಮಾಹಿತಿಯನ್ನು ಸಂಗ್ರಹಿಸುತ್ತಿರುವುದು ತಮ್ಮೆಲ್ಲರಿಗೂ ತಿಳಿದಿರುವ ವಿಷಯ ಎಸ್.ಎ.ಟಿ.ಎಸ್ ತಂತ್ರಾಂಶದಲ್ಲಿ ಈಗಾಗಲೇ ಶಾಲಾ ಮುಖ್ಯಸ್ಥರು ಇಂದೀಕರಿಸುತ್ತಿರುವ ಮಾಹಿತಿಯನ್ನು ಯುಡೈಸ್ ತಂತ್ರಾಂಶಕ್ಕೆ ಅಳವಡಿಸಲು ರಾಷ್ಟ್ರ ಮಟ್ಟಕ್ಕೆ ಸಲ್ಲಿಸಲಾಗಿತು. ಈ ಮಾಹಿತಿಯನ್ನು ರಾಷ್ಟ್ರಮಟ್ಟದ ಪೋರ್ಟಲ್‌ನಲ್ಲಿ ಅಳವಡಿಸಿದ ಶಾಲಾ ಹಂತದಲ್ಲಿ ಕೆಲವು ಮಾಹಿತಿಗಳು ಅಪೂರ್ಣವಾಗಿರುವುದರಿಂದ/ತಪ್ಪಾಗಿರುವುದರಿಂದ ಶಾಲಾ ಲಾಗಿನ್ ನಲ್ಲಿ ಇಂದೀಕರಿಸಲು/ ಸರಿಪಡಿಸಲು ಅವಕಾಶ ನೀಡಲಾಗಿದೆ. ಈ ನಿಟ್ಟಿನಲ್ಲಿ ದಿನಾಂಕ:15.06.2023 ರಂದು ಹಮ್ಮಿಕೊಳ್ಳಲಾದ ಜೂಮ್ ಸಭೆಯಲ್ಲಿ ಮಾಡ್ಯೂಲ್‌ವಾರು ಪರಿಶೀಲಿಸಲು ಹಾಗೂ ಮಾಹಿತಿಗಳನ್ನು ಸರಿಪಡಿಸಿಕೊಳ್ಳಬೇಕಾಗಿರುವ ವಿಧಾನವನ್ನು ವಿವರವಾಗಿ ತಿಳಿಸಲಾಗಿತು. Validation and Certification ಪ್ರಕ್ರಿಯೆಯನ್ನು ಒಳಗೊಂಡಂತೆ ಎಲ್ಲಾ ಪ್ರಕ್ರಿಯೆಗಳನ್ನು ದಿನಾಂಕ:26.06.2023 ರೊಳಗೆ ಶಾಲೆಯಿಂದ ಜಿಲ್ಲಾ ಹಂತದವರೆಗೆ ಕಡ್ಡಾಯವಾಗಿ ಪೂರ್ಣಗೊಳಿಸಲು ಸೂಚಿಸಿದೆ.

ಜೂಮ್ ಸಭೆಯಲ್ಲಿ ತಿಳಿಸಿರುವ ಇಂದೀಕರಣ ಪ್ರಕ್ರಿಯೆಂತೆ ತಮ್ಮ ಜಿಲ್ಲೆಯ ಎಲ್ಲಾ ಶಾಲಾ ಮುಖ್ಯಸ್ಥರಿಗೆ ಮತ್ತು ಪ್ರಾಂಶುಪಾಲರಿಗೆ ಸೂಕ್ತ ಹಂತದಲ್ಲಿ (ಕ್ಲಸ್ಟರ್ /ಬ್ಲಾಕ / ಜಿಲ್ಲಾ) ತರಬೇತಿಯನ್ನು ಆಯೋಜಿಸಿ ನಿಖರವಾದ ಮಕ್ಕಳುವಾರು ಮಾಹಿತಿಯನ್ನು ಯುಡೈಸ್+ ಮತ್ತು ಎಸ್.ಎ.ಟಿ.ಎಸ್ ತಂತ್ರಾಂಶಗಳಲ್ಲಿ Validation and Certification ಆಗಿರುವ ಬಗ್ಗೆ ಖಾತರಿಪಡಿಸಿಕೊಳ್ಳಲು ಜಿಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಉಪಸಮನ್ವಯಾಧಿಕಾರಿಗಳು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

ಯುಡೈಸ್‌ನಲ್ಲಿರುವ ಮಾಹಿತಿಯನ್ನು ಆಧರಿಸಿ ವಿವಿಧ ಶೈಕ್ಷಣಿಕ ಸೂಚ್ಯಾಂಕಗಳ (ಎಸ್.ಡಿ.ಜಿ, ಪಿ.ಜಿ.ಐ, ಎಸ್ . ಇ.ಕ್ಯು.ಐ ಇತ್ಯಾದಿ...) ಲೆಕ್ಕಚಾರ ಯೋಜನೆಗಳನ್ನು ರೂಪಿಸಲು ಎಲ್ಲಾ ಹಂತಗಳಲ್ಲಿ (ರಾಷ್ಟ್ರ ಮಟ್ಟದಿಂದ ಶಾಲಾ ಮಟ್ಟದವರೆಗೆ) ಬಳಸುತ್ತಿರುವುದರಿಂದ ಸರಿಯಾದ ಮಾಹಿತಿಯನ್ನು ನಮೂದಿಸುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು ಅತ್ಯವಶ್ಯಕವಾಗಿರುತ್ತದೆ. ಒಂದು ವೇಳೆ ತಂತ್ರಾಂಶದಲ್ಲಿ ಮಾಹಿತಿಯು ತಪ್ಪು ಅಥವಾ ಅಪೂರ್ಣವಾಗಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ತಾವೇ ನೇರ ಜವಾಬ್ದಾರಿಯಾಗಿರುತ್ತೀರಿ.

ಈ ಪ್ರಕ್ರಿಯೆಯ ಕುರಿತು ಆಗಿಂದಾಗ್ಗೆ ಆಯೋಜಿಸುವ ಪ್ರಗತಿ ಪರಿಶೀಲನಾ ಸಭೆಗಳಿಗೆ ಎಲ್ಲಾ ಜಿಲ್ಲೆಯ ಉಪಸಮನ್ವಯಾಧಿಕಾರಿ, ಸಹಾಯಕ ಯೋಜನಾ ಸಮನ್ವಯಾಧಿಕಾರಿ ಹಾಗೂ ಕಂಪ್ಯೂಟರ್ ಪ್ರೋಗ್ರಾಮರ್‌ಗಳು ಕಡ್ಡಾಯವಾಗಿ ಹಾಜರಾಗಲು ತಿಳಿಸಿದೆ. ಮುಂದುವರೆದು ಏನಾದರೂ ತಾಂತ್ರಿಕ ಸಮಸ್ಯಗಳಿದ್ದಲ್ಲಿ ಈಗಾಗಲೇ ರಾಜ್ಯ ಮಟ್ಟದಲ್ಲಿ ತಂತ್ರಾಂಶವನ್ನು ನಿರ್ವಹಿಸುತ್ತಿರುವ ಶ್ರೀ. ಹೆಚ್. ಸಿ. ನಾಗೇಶ್, ಕಂಪ್ಯೂಟರ್ ಪ್ರೋಗ್ರಾಮರ್‌ರವರನ್ನು ಸಂಪರ್ಕಿಸಬಹುದಾಗಿದೆ.

ನಿರ್ದೇಶಕರು (ಕಾರ್ಯಕ್ರಮ)
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು

ಇವರಿಗೆ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳಿಗೆ (ಆಡಳಿತ), ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು ಹಾಗೂ ಕಂಪ್ಯೂಟರ್ ಪ್ರೋಗ್ರಾಮರ್ ಗಳಿಗೆ ಅಗತ್ಯ ಕ್ರಮಕ್ಕಾಗಿ.
2. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ
3. ರಾಜ್ಯ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು,

1. ರಾಜ್ಯ ಯೋಜನಾ ನಿರ್ದೇಶಕರು/ನಿರ್ದೇಶಕರು ಕಾರ್ಯಕ್ರಮ ರವರ ಆಪ್ತ ಶಾಖೆಗಳಿಗೆ ಕಳುಹಿಸುತ್ತಾ, ಸದರಿ ವಿಷಯವನ್ನು ಮಾನ್ಯರ ಅವಗಾಹನೆಗೆ ತರಲು ಸೂಚಿಸಿದೆ.
2. ಕಛೇರಿ ಪ್ರತಿ.